161

ಫಾರೆಸ್ಟ್.

ಇನ್ಸ್ಟ್ರಾಮೆಂ.

ತಾರೀಖು 19ನೆ ಡಿಸೆಂಬರ್ 1903.

ನಂಬರ್ 420—5095, ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದಿಂದ ಘಾಯಿಷ್ ಆದ 1901ನೆ ಇಸವಿ ಜನವರಿ 7ನೆ ಪುಸ್ತಕಂ 422—ಫಾ. ಎಫ್. 15–1900ನೆ ನಂಬರಿನಲ್ಲಿ ನಮೂದಿಸಿರುವ 1894ನೆ ಇಸವಿ ಏಪ್ರಿಲ್ 10ನೆ ಪುಸ್ತಕಂ 8ನೆ ನಂಬರ್ ನೋಟಿಫಿಕೇಷನ್ನಲ್ಲಿ ಕಂಡ ಬೆಲಂದ್ವಾಡಿ ಸ್ಟೇಟ್ ಫಾರೆಸ್ಟ್‌ನ ಚಕ್ಕುಬಂದಿ ವಿವರಣೆಗಳನ್ನು ರದ್ದುಮಾಡಿ ಇದರಿಂದ ನಮೂದಿಸಿರುವಂತೆ ಸರಿಯಾಗಿ ತಿದ್ದಪಾಟುದ ಖರಾರ್ವಾಕಾ ಚಕ್ಕುಬಂದಿಯನ್ನು ಸರ್ಕಾರದವರು ಮಂಜೂರ್ಮಾಡಿರುತ್ತಾರಾಗಿ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟ್.	ತಾಲ್ಲೂಕು.	ಸಮುದಾಯ ವಿಸ್ತೀರ್ಣ.	ಚಕ್ಕುಬಂದಿ.
ಬೆಂಗಳೂರು	ಕಾರ್ಕಾನಹಳ್ಳಿ	47 ಚದರ ಮೈಲಿ, 204 ಎಕರೆ. 89 ಗುಂಟೆ	ಉತ್ತರ.—ಹದ್ದುಬಸ್ತು ಲೈನು (ಮಳವಳ್ಳಿ ತಾಲ್ಲೂಕು) ಬೂಕಳ್ಳಿ ಸರ್ವೆ 27ನೆ ನಂಬರಿನ ನೈರುತ್ಯ ಮೂಲೆಯಿಂದ ಹೊರಟು ಅದೇ ನಂಬರಿನ ದಕ್ಷಿಣಪಾರ್ಶ್ವದಲ್ಲೇ ಹೋಗಿ ಆಗ್ನೇಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ದಾಂತೂರು ಸರ್ವೆ 86 ಮತ್ತು 15ನೆ ನಂಬರುಗಳ ದಕ್ಷಿಣಪಾರ್ಶ್ವದಲ್ಲೇ ಹೋಗಿ ಮೇಲ್ಕಂಡ 15ನೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ; ನಂತರ ಚಿಕ್ಕಮುದಾಡಿ ಸರ್ವೆ 26ನೆ ನಂಬರ್ ಮತ್ತು ನಾಯಿಕನಹಳ್ಳಿ ಸರ್ವೆ 38ನೆ ನಂಬರುಗಳ ದಕ್ಷಿಣ ಪಾರ್ಶ್ವದಲ್ಲಿ ಹೋಗಿ ಮೇಲ್ಕಂಡ 38ನೆ ನಂಬರಿನ ಆಗ್ನೇಯ ಮೂಲೆಯಲ್ಲಿ ಆಲಹಳ್ಳಿ ಸರ್ವೆ 174ನೆ ನಂಬರಿನ ವಾಯವ್ಯ ಮೂಲೆಗೆ ಸೇರುತ್ತದೆ. ಪೂರ್ವ.—ಅಲ್ಲಿಂದ ಆಲಹಳ್ಳಿ ಸರ್ವೆ 174 ಮತ್ತು 173ನೆ ನಂಬರುಗಳ ಪಶ್ಚಿಮ ಪಾರ್ಶ್ವದಲ್ಲಿ ಊಯಂಬಳ್ಳಿ ಸರ್ವೆ 147ನೆ ನಂಬರಿನ ವಾಯವ್ಯ ಮೂಲೆಗೆ ಹೋಗುತ್ತದೆ; ನಂತರ ಅದೇ ನಂಬರಿನ ಪಶ್ಚಿಮ ದಿಕ್ಕಿನಿಂದ ನೈರುತ್ಯ ಮೂಲೆಗೆ ಹೋಗುತ್ತದೆ; ಅಲ್ಲಿಂದ ಹೆಲಗಹಳ್ಳಿ ಸರ್ವೆ 102ನೆ ನಂಬರಿನ ಪಶ್ಚಿಮ ಮತ್ತು ನೈರುತ್ಯ ದಿಕ್ಕುಗಳಿಂದ ಹಾರೋಸಿವನಹಳ್ಳಿ ಸರ್ವೆ 42ನೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ; ಆಮೇಲೆ ಇದೇ ನಂಬರಿನ ದಕ್ಷಿಣಪಾರ್ಶ್ವದಿಂದ ಆಗ್ನೇಯ ಮೂಲೆಗೆ ಹೋಗುತ್ತದೆ; ನಂತರ ಚಣ್ಣೇಗೌಡು ಸರ್ವೆ 12ನೆ ನಂಬರಿನ ದಕ್ಷಿಣ ಪಾರ್ಶ್ವದಿಂದ ಅರ್ಕಾವತೀ ನದಿಯ ಬಲಭಾಗದ ದಡದಲ್ಲಿ ಅದೇ ನಂಬರಿನ ಆಗ್ನೇಯ ಮೂಲೆಗೆ ಸೇರುತ್ತದೆ; ಅಲ್ಲಿಂದ ಅರ್ಕಾವತೀ ನದಿಯ ಬಲಪಾರ್ಶ್ವದ ದಡದಲ್ಲೆ ಅರ್ಕಾವತಿ ಮತ್ತು ಕಾವೇರಿ ನದಿಗಳ ಸಂಗಮದ ವರೆವಿಗೂ ಹೋಗುತ್ತದೆ. ದಕ್ಷಿಣ.—ಅಲ್ಲಿಂದ ಕಾವೇರಿ ನದಿಯ ಎಡಪಾರ್ಶ್ವದ ದಡದ ಮಾರ್ಗವಾಗಿ ಬಸವನ ಪಟ್ಟ ಮತ್ತು ಬೆಲಂದ್ವಾಡಿ ಸ್ಟೇಟ್ ಫಾರೆಸ್ಟ್‌ಗಳು ಸೇರುವ ಪ್ರದೇಶದ ವರೆವಿಗೂ ಹೋಗುತ್ತದೆ. ಪಶ್ಚಿಮ.—ಅಲ್ಲಿಂದ ಬಸವನ ಪಟ್ಟದ ಸ್ಟೇಟ್ ಫಾರೆಸ್ಟ್‌ಗೆ ಪೂರ್ವ ದಿಕ್ಕಿನಲ್ಲಿ ಹೋಗಿ ಹೊರಟ ಸ್ಥಳವನ್ನು ಕೂಡಿಕೊಳ್ಳುತ್ತದೆ. ಟಿಪ್ಪಣಿ.—ಮೇಲ್ಕಂಡ ಫಾರೆಸ್ಟಿನೊಳಗೆ 8 ಹಳ್ಳಿಗಳಿರುತ್ತವೆ. ಪ್ರತಿಯೊಂದು ಹಳ್ಳಿಯೂ ಫಾರೆಸ್ಟು ಸರಹದ್ದಿನೊಳಗೆ ಸೇರಿದ್ದಲ್ಲದೆ ರಸರ್ವೇಷನ್ನಿಗೆ ಬಳಪಡದೇ ಇರುತ್ತದೆಂದು ತೋರಿಸುವ ಗ್ರೇಸಿಂಗ್ ಲೈಸ್ ಅಥವಾ ಹಲ್ಲನ್ನು ಹದ್ದುಬಸ್ತು ಉಳ್ಳದ್ದಾಗಿದೆ.

ನಂಬರು.	ಗ್ರಾಮದ ಹೆಸರು.	ಸರ್ವೆ ನಂಬರುಗಳು.	ವಿಸ್ತೀರ್ಣ.	ಷರಾ.
			ಎ. ಗು.	
1	ಚೆಲಂದ್ವಾಡಿ..	1ರಿಂದ 17ರ ವರಿಗೆ.	219—35	ಆಲಹಳ್ಳಿಯಿಂದ ಚೆಲಂದ್ವಾಡಿಗೆ ಹೋಗುವ 2 ಗಜ ಅಗಲ 2½ ಮೈಲಿ ಉದ್ದ ನೀಳ್ಳ ಕಾಲುದಾರಿಯಿಂದ ಜನರೂ, ದನಕರಗಳೂ ತಿರುಗಾಡತಕ್ಕದ್ದು. ಈ ದಾರಿಯು ಆಲಹಳ್ಳಿ ಸರ್ವೆ 173ನೆ ನಂಬರಿನ ನೈರುತ್ಯ ಮೂಲೆಯ ಬಾಂದಿನಿಂದ ಉತ್ತರಕ್ಕೆ ಸುಮಾರು 20 ಗಜ ದೂರದಲ್ಲಿ ಫಾರೆಸ್ಟನ್ನು ಪ್ರವೇಶಿಸಿ ನೈರುತ್ಯವಾಗಿಯೆ ಹೋಗಿ ಹಳ್ಳಿ ಎಲ್ಲೆಯನ್ನು ಸೇರುತ್ತದೆ.
		ಹಳ್ಳಿ ..	0—34	
		ಹಳ್ಳ ..	0—22	
		ಪಾ.ದಿ ...	0—19	
			221—30	
2	ಮಕ್ಕಳಂದ..	1ರಿಂದ 22ರ ವರಿಗೆ.	337— 1	ದುಂತೂರಿನಿಂದ ಮಕ್ಕಳಂದಕ್ಕೆ ಹೋಗುವ 3 ಜಗೆ ಅಗಲವೂ 2 ಮೈಲಿ ಉದ್ದವೂ ಉಳ್ಳ ಬಂಡೀದಾರಿಯಲ್ಲಿ ಜನರೂ, ದನಕರಗಳೂ ಮತ್ತು ಬಂಡಿಗಳೂ ತಿರುಗಾಡತಕ್ಕದ್ದು. ಈ ದಾರಿಯು ದುಂತೂರು ಸರ್ವೆ 15 ಮತ್ತು 86ನೆ ನಂಬರುಗಳ ಬಾಂದುಗಳು ಸೇರುವ ಸ್ಥಳದಿಂದ ಉತ್ತರಕ್ಕೆ ಸುಮಾರು 2 ಫರ್ಲಾಂಗ್‌ನಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಪೂರ್ವಕ್ಕೂ, ದಕ್ಷಿಣಕ್ಕೂ ಹೋಗಿ ಮಕ್ಕಳಂದದ ಸರ್ವೆ 8ನೆ ನಂಬರಿನ ವಾಯವ್ಯ ಮೂಲೆಯ ಬಾಂದುಗಳಿಗೆ ಈಶಾನ್ಯವಾಗಿ ಸುಮಾರು 20 ಗಜ ದೂರದಲ್ಲಿ ಮಕ್ಕಳಂದವನ್ನು ಸೇರುತ್ತದೆ.
		ಹಳ್ಳ ...	4 -36	
			341—37	
				ಮಕ್ಕಳಂದದಿಂದ ಮಾದರೆ ಕಡೆಗೆ ಹೋಗುವ 2 ಗಜ ಅಗಲ 3 ಮೈಲಿ ಉದ್ದವಿರುವ ಕಾಲುದಾರಿಯು ಜನರು ತಿರುಗುವದಕ್ಕಾಗಿ ಮಾತ್ರವೇ ಇರತಕ್ಕದ್ದು. ಈ ದಾರಿಯು ಮಕ್ಕಳಂದದ ಸರ್ವೆ 8ನೆ ನಂಬರಿನ ನೈರುತ್ಯಮೂಲೆಯಿಂದ ಬಾಗು ಬಾಂದುಗಳ 2ನೆ ಗುಂಪಿನಿಂದ ಉತ್ತರಕ್ಕೆ ಸುಮಾರು 20 ಗಜ ದೂರದಲ್ಲಿ ಫಾರೆಸ್ಟನ್ನು ಹೊಕ್ಕು ನೈರುತ್ಯವಾಗಿ ಉದ್ದಕ್ಕೂ ಫಾರೆಸ್ಟಿನಲ್ಲೇ ಮಾದರೆ ದೇವಸ್ಥಾನಕ್ಕೆ ಹೋಗುತ್ತದೆ.
				ಮಕ್ಕಳಂದದಿಂದ ಆಲಹಳ್ಳಿಗೆ ಹೋಗುವ 3 ಗಜ ಅಗಲವೂ 2 ಮೈಲಿ ಉದ್ದವೂ ಉಳ್ಳ ಕಾಲುದಾರಿ ಜನರೂ ಮತ್ತು ಜಾನುವಾರುಗಳೂ ತಿರುಗಾಡುವದಕ್ಕಾಗಿ ಇರತಕ್ಕದ್ದು. ಈ ದಾರಿಯು ಮಕ್ಕಳಂದದ ಸರ್ವೆ 1ನೆ ನಂಬರಿನ ಆಗ್ನೇಯ ಮೂಲೆಯ ಬಾಂದುಗಳಿಗೆ ಉತ್ತರಕ್ಕೆ ಸುಮಾರು 20 ಗಜದಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಪೂರ್ವದಿಕ್ಕಾಗಿ ಹೋಗಿ ಡಿವಾರ್ಕೇರ್ಡ್ ಲೈನನ್ನು ದಾಟಿ, ಆಲಹಳ್ಳಿ ಸರ್ವೆ 174ನೆ ನಂಬರಿನಲ್ಲಿ ಹರಿಯುವ ನಾಲೆಯಿಂದ ದಕ್ಷಿಣ 30ಗಜ ದೂರದಲ್ಲಿ ಮೇಲ್ಕಂಡ ಸರ್ವೆ 1ನೆ ನಂಬರನ್ನು ಬಿಡುತ್ತದೆ.
3	ಹೈದಾ ...	1ನೆ ನಂಬರು ...	4— 7	ಚೆಲಂದ್ವಾಡಿಯಿಂದ ಹೈದಾದ ಕಡೆಗೆ ಹೋಗುವ 2ಗಜ ಅಗಲವೂ 9ಮೈಲಿ ಉದ್ದವೂ ಉಳ್ಳ ಕಾಲ್ದಾರಿಯು ಜನರೂ ಮತ್ತು ದನಕರಗಳೂ ತಿರುಗಾಡುವದಕ್ಕಾಗಿ ಇರತಕ್ಕದ್ದು. ಈ ದಾರಿಯು ಚೆಲಂದ್ವಾಡಿ ಸರ್ವೆ 3ನೆ ನಂಬರಿನಲ್ಲಿ ಹರಿಯುವ ನಾಲೆಗೆ ಪಶ್ಚಿಮ ಸುಮಾರು 40 ಗಜದಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಡಿವಾರ್ಕೇರ್ಡ್ ಲೈನನ್ನು ದಾಟಿ ದಕ್ಷಿಣವಾಗಿ ಫಾರೆಸ್ಟಿನಲ್ಲೇ ಹೋಗಿ ಫಾರೆಸ್ಟಿನಲ್ಲೇ ಹೈದಾಗುತ್ತದೆ.
4	ವೀರಸಂದ್ರ...	1ರಿಂದ 14ರ ವರಿಗೆ.	175—15	ಹೆಗ್ಗನೂರಿಂದ ವೀರಸಂದ್ರದ ಕಡೆಗೆ ಹೋಗುವ 2 ಗಜ ಅಗಲವೂ 3 ಮೈಲಿ ಉದ್ದವೂ ಉಳ್ಳ ಕಾಲುದಾರಿಯಿಂದ ಜನರೂ ಮತ್ತು ದನಕರಗಳೂ ತಿರುಗಾಡತಕ್ಕದ್ದು. ಈ ದಾರಿಯು ಸರ್ವೆ 19ನೆ ನಂಬರಿನ ನೈರುತ್ಯ ಮೂಲೆಯ ಬಾಂದುಗಳಿಗೆ ದಕ್ಷಿಣ ಸುಮಾರು 30 ಗಜ ದೂರದಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಪಶ್ಚಿಮವಾಗಿಯೂ ದಕ್ಷಿಣವಾಗಿಯೂ ಹೋಗಿ ವೀರಸಂದ್ರದ ಸರ್ವೆ 13ನೆ ನಂಬರಿನ ಆಗ್ನೇಯ ಮೂಲೆಯಿಂದ ಮಧ್ಯದ ಬಾಗು ಬಾಂದುಗಳ 2ನೆ ಗುಂಪಿನಿಂದ ಉತ್ತರಕ್ಕೆ ಸುಮಾರು 40 ಗಜ ದೂರದಲ್ಲಿ ಹಳ್ಳಿಯ ಎಲ್ಲೆಯನ್ನು ಪ್ರವೇಶಿಸುತ್ತದೆ.
		ಹಳ್ಳಿ ..	1—23	
		ಹಾದಿ ..		
			177— 5	

ನಂಬರು.	ಗ್ರಾಮದ ಹೆಸರು.	ಸರ್ವೆ ನಂಬರುಗಳು.	ವಿಸ್ತೀರ್ಣ. ಎ. ಗು.	ಪಥ.
5	ಹೂಳ್ಯೆ ...	1ರಿಂದ 6ರ ವರೆವಿಗೆ.	93—33 0—34 94—27	ಮಕ್ಕಳಂದದಿಂದ ಹೂಳ್ಯದ ಕಡೆಗೆ ಹೋಗುವ 2 ಗಜ ಅಗಲವೂ 4 ಮೈಲಿ ಉದ್ದವೂ ಉಳ್ಳ ಕಾಲುದಾರಿ ಜನರು ತಿರುಗಾಡುವದಕ್ಕೆ ಮಾತ್ರವೇ ಇರತಕ್ಕದ್ದು. ಈ ದಾರಿಯು ಮಕ್ಕಳಂದದ ಸರ್ವೆ 8ನೆ ನಂಬರಿನ ನೈರುತ್ಯ ಮೂಲೆಯ ಬಾಂದುಗಳಿಗೆ ಪೂರ್ವ ಸುಮಾರು 30 ಗಜ ದೂರದಲ್ಲಿ ಫಾರೆಸ್ಟನ್ನು ಹೊಕ್ಕು ದಕ್ಷಿಣವಾಗಿ ಫಾರೆಸ್ಟಿನಲ್ಲೇ ಹೋಗಿ ಅಲ್ಲೇ ಖೈದಾಗುತ್ತದೆ. ಚಿಲಂದ್ಯಾಡಿಯಿಂದ ಹೂಳ್ಯದ ಕಡೆಗೆ ಹೋಗುವ 4 ಆಡಿ ಅಗಲವೂ 2 ಮೈಲಿ ಉದ್ದವೂ ಉಳ್ಳ ಕಾಲುದಾರಿಯು ಜನರು ಮತ್ತು ಜಾನುವಾರುಗಳು ತಿರುಗಾಡುವದಕ್ಕಾಗಿ ಇರತಕ್ಕದ್ದು. ಈ ದಾರಿಯು ಚಿಲಂದ್ಯಾಡಿ ಸರ್ವೆ 3ನೆ ನಂಬರಿನಲ್ಲಿ ಹರಿಯುವ ಹಳ್ಳಕ್ಕೆ ಪಶ್ಚಿಮ ಸುಮಾರು 40 ಗಜ ದೂರಲ್ಲಿ ಫಾರೆಸ್ಟನ್ನು ಹೊಕ್ಕು ಎಲ್ಲೆಕಟ್ಟನ್ನು ದಾಟಿ ಪಶ್ಚಿಮವಾಗಿ ಫಾರೆಸ್ಟಿನಲ್ಲೇ ಹೋಗಿ ಹೂಳ್ಯದ ಸರ್ವೆ 6ನೆ ನಂಬರಿನ ಈಶಾನ್ಯ ಮೂಲೆಯ ಬಾಂದುಗಳಿಗೆ ದಕ್ಷಿಣ ಸುಮಾರು 1 ಫರ್ಲಾಂಗಿನಲ್ಲಿ ಹಳ್ಳಿಯ ಎಲ್ಲೆಯನ್ನು ಸೇರುತ್ತದೆ.
6	ಹೆಗ್ಗನೂರು..	1ರಿಂದ 68ರ ವರೆವಿಗೆ. ಹಳ್ಳಿ .. ದಾರಿ ... ಹಳ್ಳ	588—35 6—14 2— 7 19—15 616—31	ಹೆಲಗಹಳ್ಳಿಯಿಂದ ಹೆಗ್ಗನೂರಿಗೆ ಹೋಗುವ 3 ಗಜ ಅಗಲವೂ 2 ಮೈಲಿ ಉದ್ದವೂ ಉಳ್ಳ ಬಂಡೀದಾರಿಯು ಜನರೂ, ದನಕರಗಳೂ ಮತ್ತು ಬಂಡಿಗಳೂ ತಿರುಗಾಡುವದಕ್ಕಾಗಿ ಇರತಕ್ಕದ್ದು. ಈ ದಾರಿಯು ಹೆಲಗಹಳ್ಳಿ ಸರ್ವೆ 102ನೆ ನಂಬರಿನ ಆಗ್ನೇಯ ಮೂಲೆಯ ಬಾಂದುಗಳಿಗೆ ವಾಯವ್ಯವಾಗಿ ಸುಮಾರು 2 ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಆಗ್ನೇಯವಾಗಿ ಹೋಗಿ ಹೆಗ್ಗನೂರು ಸರ್ವೆ 42ನೆ ನಂಬರಿನ ಪೂರ್ವದಿಕ್ಕಿನ ಹದ್ದುಬಸ್ತು ಬಾಂದಿನ ಬಳಿಯಲ್ಲಿ ಮೇಲ್ಕಂಡ ಸರ್ವೆ 102ನೆ ನಂಬರನ್ನು ಬಿಡುತ್ತದೆ.
7	ಜೊಮ್ಮಸಂದ್ರ ದೊಡ್ಡಿ.	2ರಿಂದ 7ರ ವರೆವಿಗೆ.	56—27	ಹೆಗ್ಗನೂರಿಂದ ಜೊಮ್ಮಸಂದ್ರ ದೊಡ್ಡಿ ಕಡೆಗೆ ಹೋಗುವ 2 ಗಜ ಅಗಲವೂ ಸುಮಾರು 1 ಮೈಲಿ ಉದ್ದವೂ ಉಳ್ಳ ಬಂಡೀಹಾದಿಯೂ ಮತ್ತು ಇದೇ ದಾರಿಯನ್ನು ಅನುಸರಿಸಿ ಮುಂದಕ್ಕೆ ಸುಮಾರು 2 ಮೈಲಿ ದೂರಿಗೆ ಹೋಗುವ ಕಾಲುದಾರಿಯೂ ಜನಗಳೂ ಮತ್ತು ದನಗಳೂ ತಿರುಗಾಡುವದಕ್ಕೆ ಇರತಕ್ಕದ್ದು. ಈ ದಾರಿಯು ಹೆಗ್ಗನೂರು ಸರ್ವೆ 64ನೆ ನಂಬರಿನ ಆಗ್ನೇಯ ಮೂಲೆಯ ಬಾಂದುಗಳಿಗೆ ಪಶ್ಚಿಮ ಸುಮಾರು 50 ಗಜದಲ್ಲಿ ಫಾರೆಸ್ಟನ್ನು ಪ್ರವೇಶಿಸಿ ದಕ್ಷಿಣವಾಗಿ ಫಾರೆಸ್ಟಿನಲ್ಲೇ ಹೋಗಿ ಅದರಲ್ಲಿಯೇ ಖೈದಾಗುತ್ತದೆ.
8	ನೆಲ್ಲೂರು ದೊಡ್ಡಿ.	1ರಿಂದ 6ರ ವರೆವಿಗೂ ಮತ್ತು 15-16ನೆ ನಂಬರುಗಳು.	40—26	ಹೆಗ್ಗನೂರಿಂದ ನೆಲ್ಲೂರು ದೊಡ್ಡಿ ಕಡೆಗೆ ಹೋಗುವ 3 ಗಜ ಅಗಲವೂ ಸುಮಾರು 4 ಮೈಲಿ ಉದ್ದವೂ ಉಳ್ಳ ಕಾಲುದಾರಿಯು ಜನರ ಮತ್ತು ದನಗಳ ಉಪಯೋಗಕ್ಕಾಗಿ ಇರತಕ್ಕದ್ದು. ಈ ದಾರಿಯು ಹೆಗ್ಗನೂರು ಸರ್ವೆ 19ನೆ ನಂಬರಿನ ಆಗ್ನೇಯ ಮೂಲೆಯ ಬಾಂದುಗಳಿಗೆ ಉತ್ತರ ಸುಮಾರು 3½ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಆಗ್ನೇಯವಾಗಿ ಫಾರೆಸ್ಟಿನಲ್ಲಿ ಹೋಗಿ ಅದರಲ್ಲೇ ಖೈದಾಗುತ್ತದೆ. ಬೆಣ್ಣೆಗೋಡಿನಿಂದ ನೆಲ್ಲೂರು ದೊಡ್ಡಿ ಕಡೆಗೆ ಹೋಗುವ 2 ಗಜ ಅಗಲವೂ 4 ಮೈಲಿ ಉದ್ದವೂ ಉಳ್ಳ ಕಾಲುದಾರಿಯು ಜನರೂ, ದನಕರಗಳೂ ತಿರುಗಾಡುವದಕ್ಕಾಗಿ ಇರತಕ್ಕದ್ದು. ಈ ದಾರಿಯು ಬೆಣ್ಣೆಗೋಡು ಸರ್ವೆ 12ನೆ ನಂಬರಿನ ದಕ್ಷಿಣ ಮೂಲೆಯ ಬಾಂದುಗಳಲ್ಲಿ ಫಾರೆಸ್ಟನ್ನು ಹೊಕ್ಕು ದಕ್ಷಿಣವಾಗಿ ಹೋಗಿ ಫಾರೆಸ್ಟಿನಲ್ಲೇ ಮುಂದಕ್ಕೆ ಹೋಗುತ್ತದೆ. ಹೆಗ್ಗನೂರಿಂದ ಸಂಗವುಕ್ಕೆ ಹೋಗುವ 3 ಗಜ ಅಗಲವೂ ಸುಮಾರು 5 ಮೈಲಿ ಉದ್ದವೂ ಉಳ್ಳ ಕಾಲುದಾರಿಯು ಜನರೂ, ದನಕರಗಳೂ ತಿರುಗಾಡುವದಕ್ಕಾಗಿ ಇರತಕ್ಕದ್ದು. ಈ ದಾರಿಯು ಹೆಗ್ಗನೂರು ಸರ್ವೆ 19ನೆ ನಂಬರಿನ ಆಗ್ನೇಯ ಮೂಲೆಯ ಬಾಂದುಗಳಿಗೆ ಉತ್ತರ ಸುಮಾರು 3½ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಹೊಕ್ಕು ಅರ್ಕಾವತಿ ಮತ್ತು ಕಾವೇರಿ ನದಿಗಳು ಕೂಡುವ ಸ್ಥಳದಲ್ಲಿ ಫಾರೆಸ್ಟಿನಲ್ಲಿಯೇ ಆಗ್ನೇಯವಾಗಿ ಸಂಗವುಕ್ಕೆ ಹೋಗುತ್ತದೆ.

ತಾರೀಖು 23ನೆ ಜನವರಿ 1904.

ನಂ. 478—5979, ಸ್ರ 1900ನೆ ಇಸವಿ XIನೆ ನಂಬರು ಮೈಸೂರು ಫಾರೆಸ್ಟ್ ರೆಗ್ಯುಲೇಷನ್ 17ನೆ ಪ್ರಕರಣ ಅನುಸರಿಸಿ ಈ ಕೆಳಗಿನ ಷಡ್ಯೂಲಿನಲ್ಲಿ ವಿವರಿಸಿರುವ ಪ್ರದೇಶವು 1904ನೆ ಇಸವಿ ಫಿಬ್ರುವರಿ 1ನೆ ತಾರೀಖು ಲಾಗಾಯತು ಸ್ಟೇಟು ಫಾರೆಸ್ಟಾಗಿ ಮಾಡಿರುತ್ತೆಂದು ಮೈಸೂರು ಸರ್ಕಾರದವರು ಈ ನೋಟಿಫಿಕೇಷನ್ ಮೂಲಕ ಪ್ರಕಿದ್ಧಪಡಿಸಿರುತ್ತಾರೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ಬ್ಲಾಕ್ ಹೆಸರು.	ವಿಸ್ತೀರ್ಣ.	ಚಕ್ಕುಬಂದಿ.
ಹುಣಸೂರು.	ಕುಣಿಗಲ್.	ಅಂದಲ್‌ಕುಪ್ಪೆ.	3,750 ಎಕರೆ. 25 ಗುಂಟೆ.	ಉತ್ತರಕ್ಕೆ—ಹುರಳಿಬೋರಸಂದ್ರ ಗ್ರಾಮದ ಸರ್ವೆ 33ನೆ ಪೂರ್ವದಿಕ್ಕಿನ ಸರಹದ್ದು ವುದ್ದಕ್ಕೂ ಇರುವ ಸದರಿ ನಂಬರು ಮತ್ತು ತಪ್ಪಸಂದ್ರ ಗ್ರಾಮದ ಸರ್ವೆ 35ನೆ ನಂಬರು ಇವುಗಳ ತ್ರಿಕೋಣ ಬಾಂದಿನಿಂದ 3 ಫರ್‌ಲಾಂಗು ಫಾಸಲೇ ಬಂದು ಪಾಯಿಂಟುಬಳಿ ಬೋರಸಂದ್ರ ವ ತಪ್ಪಸಂದ್ರ ಈ ಗ್ರಾಮಗಳ (ಬವುಂಡರಿ) ಸರಹದ್ದಿನಿಂದ ಲೈನುಹೊರಟು ತಪ್ಪಸಂದ್ರ ಗ್ರಾಮದ ಸರ್ವೆ 35ನೆ ನಂಬರು ಮೇಲೆ ಪೂರ್ವದಿಕ್ಕಾಗಿ ಹಾದು ಯಾಚಗಟ್ಟದ ಸರ್ವೆ 5ನೆ ನಂಬರು ನೈರುತ್ಯದಿಕ್ಕಿನ ಕೋಪರೆಗೆ ಕೇರಿ ಅಲ್ಲಿ ಯಾಚಗಟ್ಟದಿಂದಾ ಹುರಳಿಬೋರಸಂದ್ರಕ್ಕೆ ಹೋಗುವ ಕಾಲುದಾರಿಗೆ ಕೂಡುತ್ತದೆ. ಪೂರ್ವಕ್ಕೆ—ಅಲ್ಲಿಂದಾ ದಕ್ಷಿಣದಿಕ್ಕಿಗೆ ಯಾಚಗಟ್ಟ ಗ್ರಾಮದ ಸರ್ವೆ 49 ಮತ್ತು 48ನೆ ನಂಬರುಗಳ ಮತ್ತು ಹುರಳಿಬೋರಸಂದ್ರದ 5ನೆ ನಂಬರು ಇವುಗಳ ಪಶ್ಚಿಮ ದಿಕ್ಕಿನ ಸರಹದ್ದು ವುದ್ದಕ್ಕೂ ಹಾದು ತಪ್ಪಸಂದ್ರ ಯಾಚಗಟ್ಟ ವ ಬೋರಸಂದ್ರ ಈ ಗ್ರಾಮಗಳ ತ್ರಿಕೋಣ ಬಾಂದುಗಲಿಂದ 3 ಫರ್‌ಲಾಂಗು ಫಾಸಲೇಲಿರುವ ಬಂದು ಫಾಯಿಂಟಿಗೆ ಕೇರುತ್ತೆ. ನಂತರ ಬೋರಸಂದ್ರ ಸರ್ವೆ 56 ತರಿಕೆರೆ ಸರ್ವೆ 61 ಈ ನಂಬರು ಮೇಲೆ ಹೊರಟುಬಂದು ತರಿಕೆರೆ 61ನೆ ನಂಬರು ನೈರುತ್ಯ ಮೂಲಯಿಂದ 3 ಫರ್‌ಲಾಂಗು ಧೂರದಲ್ಲಿರುವ ಬಂದು ಗುರ್ತಿನ ಬಳಿ ಆ ನಂಬರ ದಕ್ಷಿಣ ಬವುಂಡರಿಗೆ ತಗಲುತ್ತೆ. ಅಲ್ಲಿಂದ ಪಶ್ಚಿಮಕ್ಕೆ ತಿರಿಗಿಕೊಂಡು ಹಂಗ್ರಿಹಳ್ಳಿ ಸರ್ವೆ 33ನೆ ನಂಬರು ಉತ್ತರಭಾಗದ ಗಡಿ ವುದ್ದಕ್ಕೂ ಬಂದು ತರಿಕೆರೆ, ಹಂಗ್ರಿಹಳ್ಳಿ ಮತ್ತು ಹಂದಲ್‌ಕುಪ್ಪೆ ಈ ಗ್ರಾಮಗಳ ತ್ರಿಕೋಣ ಬಾಂದುಗಳಿಗೆ ಕೇರುತ್ತೆ. ಆ ಬಳಿಕ ಅದೇದಿಕ್ಕಿಗೆ ಸೊಂಡೆಕೊಪ್ಪದಿಂದ ತರಿಕೆರೆಗೆ ಹೋಗುವ ಕಾಲುದಾರಿ ವುದ್ದಕ್ಕೂ $\frac{3}{4}$ ಫರ್‌ಲಾಂಗು ಧೂರದವರಿಗೂ ಬಂದು ವಾಯವ್ಯ ಕಡೆಗೆ ಇರುವ ಬಂದು ಹಳ್ಳವನ್ನು 2 ಫರ್‌ಲಾಂಗು ಧೂರದವರಿಗೂ ಅನುಸರಿಸಿ ಹೋಗುತ್ತದೆ. ಅಲ್ಲಿಂದ ದಕ್ಷಿಣದಿಕ್ಕಾಗಿ ಅದೇ ಗ್ರಾಮದ ಸರ್ವೆ 10 ಮತ್ತು 1ನೆ ನಂಬರುಗಳ ಮೇಲೆ ಹಾದು $\frac{1}{4}$ ಮೈಲಿ ಫಾಸಲೆವರಿಗೂ ಬಂದು ಆ ಹಳ್ಳವನ್ನು ಕೇರುತ್ತೆ. ಬಳಿಕ ಈಶಾನ್ಯಕ್ಕೆ ತಿರಿಗಿಕೊಂಡು ಹಂದಲ್‌ಕುಪ್ಪೆ ಸರ್ವೆ 1ನೆ ನಂಬರು ಮೇಲೆ ಹೊರಟು ಹಂದಲ್‌ಕುಪ್ಪೆ, ತರಿಕೆರೆ ಮತ್ತು ಹಂಗ್ರಿಹಳ್ಳಿ ಈ ಗ್ರಾಮದ ತ್ರಿಕೋಣ ಬಾಂದುಗಳಿಂದ 3 ಫರ್‌ಲಾಂಗು ಧೂರದಲ್ಲಿ ಬಂದು ಪಾಯಿಂಟುಬಳಿ ಹಂಗ್ರಿಹಳ್ಳಿ ಗ್ರಾಮದ ಸರ್ವೆ 33ನೆ ನಂಬರು ಪಶ್ಚಿಮಕಡೆ ಗಡಿಗೆ ಮುಟ್ಟುತ್ತದೆ. ಅಲ್ಲಿಂದ ಅದೇ ದಿಕ್ಕಾಗಿ ಹಂಗ್ರಿಹಳ್ಳಿ ಸರ್ವೆ 33ನೆ ನಂಬರು ಮೇಲೆ $2\frac{1}{2}$ ಫರ್‌ಲಾಂಗು ಧೂರ ಬರುತ್ತೆ. ನಂತರ ಆಗ್ನೇಯ ಮುಖವಾಗಿ ಅದೇ ಸರ್ವೆ ನಂಬರು ಮೇಲೆ ಹಾಗೆ ಕಲ್ಲನಾಯ್ಕನಹಳ್ಳಿ ಸರ್ವೆ 1ನೆ ನಂಬರು ವಾಯವ್ಯ ಮೂಲೆಗೆ ಕೇರುತ್ತೆ. ಅಲ್ಲಿಂದ ನೈರುತ್ಯವಾಗಿಯು ಆಗ್ನೇಯಕ್ಕಾಗಿಯು ಕಲ್ಲಹಳ್ಳಿ ಸರ್ವೆ 1ನೆ ನಂಬರು ಕಿನಾರೆಲಿ ಹೊರಟುಬಂದು ಕಲ್ಲಹಳ್ಳಿ ಗಡಿವರಿಗೆ ಬರುತ್ತೆ. ಬಳಿಕ ಕುದ್ದ ದಕ್ಷಿಣದಿಕ್ಕಿಗೆ ತಿರಿಗಿ ಕೆಂಪನಹಳ್ಳಿ ಸರ್ವೆ 29ನೆ ನಂಬರು ಮೇಲೆ 2 ಫರ್‌ಲಾಂಗು ಧೂರ ಬಂದು ಕರಿ

164

165

ಪೆಡ್ಯೂಲ್.

ತಾಲ್ಲೂಕು.	ಹೋಬಳಿ.	ಬ್ಯಾಕಿನ ಹೆಸರು.	ವಿಸ್ತೀರ್ಣ.	ಚಕ್ಕುಬಂದಿ.
ಕುಣಿಗಲ್.	ಹಂದೆಕೆಹಳ್ಳಿ		3750 ಎಕರೆ, 25 ಗುಂಟೆ.	ಕಲ್ಲುಗುಡ್ಡದ ಕುಂಬಿಗೆ ತಗಲುತ್ತೆ. ಅಲ್ಲಿಂದ ಆಗ್ನೇಯವಾಗಿ ಅದೇ ಸರ್ವೆ ನಂಬರು ಮೇಲೆ ½ ಮೈಲಿ ಫಾಸಲೆ ಬಂದು ಬಳಿಗುಡ್ಡಿಯಂಬ ಪ್ರತ್ಯೇಕವಾಗಿ ಇರುವ ಇನ್ನೊಂದು ಗುಡ್ಡದ ಕುಂಬಿಗೆ ಹೋಗುತ್ತೆ. ತದನಂತರ ಶುದ್ಧ ಪೂರ್ವದಿಕ್ಕಾಗಿ ಅದೇ ಸರ್ವೆ ನಂಬರು ಮೇಲೆ ಹಾದು ಸದರಿ ಕೆಂಪನಹಳ್ಳಿ ಗ್ರಾಮದ ಸರ್ವೆ 31 ವ 32 ನಂಬರುಗಳ ಬವುಂಡರಿ ಬಳಿ ತುಮಕೂರು-ಹುಲಿಯೂರುದುರ್ಗ ರಸ್ತೆಗೆ ಬಂದು ಕೇರುತ್ತೆ. ಆ ಬಳಿಕ ಆಗ್ನೇಯದಿಕ್ಕಾಗಿ ಸದರಿ ರಸ್ತೆ ವುದ್ದಕ್ಕೂ ಹಾದು ಕೆಂಪನಹಳ್ಳಿ ಇನಾಂ ದೊಡ್ಡಮಾವತ್ತೂರು ಮತ್ತು ಇನಾಂ ಚಿಕ್ಕಮಾವತ್ತೂರು ಈ ಗ್ರಾಮಗಳ ತ್ರಿಕೋಣ ಬಾಂದವರಿಗೆ ಬರುತ್ತೆ. ದಕ್ಷಿಣಕ್ಕೆ.—ಅಲ್ಲಿಂದ ನೈರುತ್ಯದಿಕ್ಕಾಗಿ ದೊಡ್ಡಮಾವತ್ತೂರು ಗ್ರಾಮದ ಉತ್ತರಗಡಿ ವುದ್ದಕ್ಕೂ ಬಂದು ದೊಡ್ಡಮಾವತ್ತೂರು, ಕೆಂಪನಹಳ್ಳಿ ಮತ್ತು ಹೊಸೂರು ಈ ಗ್ರಾಮಗಳ ತ್ರಿಕೋಣ ಬಾಂದುವರಿಗೆ ದಾಖಲಾಗುತ್ತೆ. ನಂತರ ಅದೇ ದಿಕ್ಕಿಗೆ ನೇಟಾಗಿ ಹೊಸೂರು ಗ್ರಾಮದ 10ನೆ ಸರ್ವೆ ನಂಬರು ಮೇಲೆ ಹಾದು ಹೊಸೂರಿಂದ ಕೆಂಪನಹಳ್ಳಿಗೆ ಹೋಗೊ ಭಂಡಿದಾರಿಗೆ ಮುಟ್ಟುತ್ತೆ. ಆ ಬಳಿಕ ನೈರುತ್ಯಕ್ಕೆ ನೆಟ್ಟಗೆ ಅದೇ ಸರ್ವೆ ನಂಬರುಮೇಲೆ ಬಂದು ಮೋದೂರು ಗ್ರಾಮದ ಸರ್ವೆ 10ನೆ ನಂಬರ ದಕ್ಷಿಣಗಡಿಗೆ ಕೇರುತ್ತೆ. ನಂತರ ಶುದ್ಧ ಉತ್ತರಕ್ಕೆ ಮೋದೂರು ಗ್ರಾಮದ ಸರ್ವೆ 10ನೆ ನಂಬರು ಮೇಲೆ ಹಾದು ಮೋದೂರು, ಕೆಂಪನಹಳ್ಳಿ ಮತ್ತು ಕಲನಾಯ್ಕನಹಳ್ಳಿ ಗ್ರಾಮಗಳ ತ್ರಿಕೋಣ ಬಾಂದುವರಿಗೆ ಬರುತ್ತೆ. ಆಮೇಲೆ ವಾಯವ್ಯ ದಿಕ್ಕಿಗೆ ಕಲನಾಯ್ಕನಹಳ್ಳಿ ಸರ್ವೆ 7ರ ಮೇಲೆ ಹಾದು ಮೋದೂರಿಂದ ಕುಣಿಗಲಿಗೆ ಹೋಗುವ ಕಾಲುದಾರಿಗೆ ಕೇರುತ್ತೆ. ಬಳಿಕ ಶುದ್ಧ ಪಶ್ಚಿಮಕ್ಕಾಗಿ ಅದೇ ಸರ್ವೆ ನಂಬರು ಮೇಲೆ ಮತ್ತು ಸರ್ವೆ 20ನೆ ನಂಬರುಮೇಲೆ ಹಾದು ಸರ್ವೆ 20ನೆ ನಂಬರುನಲ್ಲಿರುವ ಕೆರೆಯ ಉತ್ತರಕೋಪರಿಗೆ ಮುಟ್ಟುತ್ತದೆ. ಅನಂತರ ನೈರುತ್ಯಕ್ಕಾಗಿ ಅದೇ ಸರ್ವೆ 20ನೆ ನಂಬರು ಮೇಲೆ ಹೊರಟು ಕಲನಾಯ್ಕನಹಳ್ಳಿ ಸರ್ವೆ 24ನೆ ನಂಬರು ವಾಯವ್ಯ ಮೂಲಗೆ ತಗಲುತ್ತೆ. ಅಲ್ಲಿಂದ ಪಶ್ಚಿಮವಾಗಿ ಹಗಡತಿಹಳ್ಳಿ ಸರ್ವೆ 12ನೆ ನಂಬರು ಮೇಲೆ ಹಾದು ಹಗಡತಿಹಳ್ಳಿಯಿಂದ ಸೊಂಡೆಕೊಪ್ಪಕ್ಕೆ ಬರುವ ಕಾಲುದಾರಿಗೆ ಕೇರುತ್ತೆ. ಬಳಿಕ ವಾಯವ್ಯದಿಕ್ಕಾಗಿ ಹಗಡತಿಹಳ್ಳಿ, ಪುಟ್ಟನಪಾಳ್ಯ ಮತ್ತು ಸೊಂಡೆಕೊಪ್ಪ ಈ ಗ್ರಾಮಗಳ ತ್ರಿಕೋಣ ಬಾಂದುವರಿಗು ಬರುತ್ತೆ. ಅನಂತರ ಪಶ್ಚಿಮಕ್ಕೆ ಇನಾಂ ಪುಟ್ಟನ ಪಾಳ್ಯದ ಉತ್ತರ ದಿಕ್ಕಿನ ಬವುಂಡರಿ ವುದ್ದಕ್ಕೂ ½ಮೈಲಿಹಾದು ಬರುತ್ತೆ.

ಷೆಡ್ಯೂಲ್.

ತಿಪ್ಪಟೂರು	ತಾಲ್ಲೂಕು	ಬ್ಲಾಕಿನ ಹೆಸರು.	ವಿಸ್ತೀರ್ಣ.	ಚಕ್ಕುಬಂದಿ.
ತಿಪ್ಪಟೂರು.	ಕುಣಿಗಲ್.	ಹಂದಲಕುಪ್ಪೆ	3750 ಎಕರೆ, 25 ಗುಂಟೆ.	ಪಶ್ಚಿಮಕ್ಕೆ — ಅಲ್ಲಿಂದ ಉತ್ತರಕ್ಕಾಗಿಯು ಈಶಾನ್ಯಕ್ಕಾಗಿಯು ಲೈನು ತಿರಿಗಿಕೊಂಡು ಸೊಂಡೆಕೊಪ್ಪದ ಸರ್ವೆ 81 ಮತ್ತು 87ನೆ ನಂಬರುಗಳ ಮೇಲೆ ಹೊರಟು ಹೊಸಪುರದ ಸರ್ವೆ 45ನೆ ನಂಬರ ದಕ್ಷಿಣಕಡಿಗೆ ಕೀರುತ್ತೆ. ಆ ನಂಬರು ಆಗ್ನೇಯ ಮೂಲೆಯಿಂದ 4 ಫರಲಾಂಗು ದೂರದಲ್ಲಿ ಬಂದು ಪಾಯಿಂಟನಲ್ಲಿರುತ್ತೆ. ಬಳಿಕ ವಾಯವ್ಯಕ್ಕೆ ಸದರಿ ಸರ್ವೆ ನಂಬರ ಮೇಲೆಯು ಮತ್ತು ಹುರಳಿಬೋರಸಂದ್ರದ 50ನೆ ನಂಬರು ಮೇಲೆಯು ಹಾಕಿ ಹುರಳಿಬೋರಸಂದ್ರ ಸರ್ವೆ 33ನೆ ನಂಬರು ಆಗ್ನೇಯ ಮೂಲೆಗೆ ಬಂದು ತಗಲುತ್ತೆ. ನಂತರ ಉತ್ತರಕ್ಕಾಗಿ ಹುರಳಿ ಬೋರಸಂದ್ರದ 33ನೆ ನಂಬರು ಪೂರ್ವಭಾಗದ ಬವುಂಡರಿ ವುದ್ದಕ್ಕೂ ಬಂದು ಹುರು ಹೊರಟ ಪಾಯಿಂಟಿಗೆ ಕೀರುತ್ತೆ.

ಈ ಕೆಳಗೆ ಕಂಡಂತೆ ಹಕ್ಕುದಾರಿಯು ಮತ್ತು ರಿಯಾಯತಿಯು ಮಂಜೂರ್ಮಾಡಿವೆ :—

ಪರಾ:—ಈ ಕೆಳಗೆ ಕಾಣಿಸಿದ ದಾರೀಲಿ ತಿರಿಗಾಡುವದಕ್ಕೆ ಹಕ್ಕುದಾರಿ ಮಂಜೂರ್ಮಾಡಿಧೆ.

ನಂಬರು 1, 2 ಮತ್ತು 3, ಜನಕ್ಕೂ, ದನಕ್ಕೂ 3 ಗಜ ಅಗಲಕ್ಕೆ ಜಾಸ್ತಿ ಇಲ್ಲಾ.

ನಂಬರು 4 ಜನಕ್ಕೂ, ದನಕ್ಕೂ, ಮತ್ತು ಗಾಡಿಗಳಿಗೂ 6 ಗಜ ಅಗಲಕ್ಕೆ ಜಾಸ್ತಿ ಇಲ್ಲಾ.

(1) ಸೊಂಡೆಕೊಪ್ಪದಿಂದ ತರಿಕೆರೆ ವರಿಗೆ ದಾರಿ-ಸೊಂಡೆಕೊಪ್ಪ ಗ್ರಾಮದ ಸರ್ವೆ 81ನೆ ನಂಬರು ಜಮಿನಿನಲ್ಲಿ ಆ ದಾರಿ ಪ್ರಾರಂಭಿಸಿ ಪೂರ್ವದಿಕ್ಕಿಗೆ 2 ಮೈಲಿವರಿಗು ಹೋಗಿ ಅಲ್ಲಿ ಹಂದಲ್‌ಕುಪ್ಪೆ ಸರ್ವೆ 10ನೆ ನಂಬರಿನಲ್ಲಿ ಅಂದರೆ ಸದರಿ ಗ್ರಾಮದ ಸರ್ವೆ 7ನೆ ನಂಬರು ನೈರುತ್ಯ ಮೂಲೆಯಿಂದ 100 ಗಜವರಿಗೂ ಬಂದು ಅಲ್ಲಿ ಬಿಟ್ಟುಬಿಡುತ್ತೆ. ಪುನಹ ತರಿಕೆರೆ ಸರ್ವೆ 61ನೆ ನಂಬರು ನೈರುತ್ಯ ಮೂಲೆಕಡೆ ಫಾರೆಸ್ಟು ವಳಕ್ಕೆ ಪ್ರವೇಶಿಸಿ ಅದೇ ನಂಬರು ಮೇಲೆ ಅರ್ಧಮೈಲಿ ಬಂದು ಅದೇ ಸರ್ವೆ ನಂಬರು ದಕ್ಷಿಣಕಡೆ ಬವುಂಡರಿ ಬಳಿ ಆಲೈರಾಗಿ ಬಿಟ್ಟುಹೋಗುತ್ತೆ.

(2) ಕಲನಾಯ್ಕನಹಳ್ಳಿಯಿಂದ ಶಂಕರೇಶ್ವರ ಮತ್ತು ದೊಣಿಗು ಹೋಗುವ ದಾರಿ.—ಕಲನಾಯ್ಕನಹಳ್ಳಿ ಸರ್ವೆ 20ನೆ ನಂಬರಿನಲ್ಲಿ ಫಾರೆಸ್ಟಿಗೆ ಪ್ರವೇಶಿಸಿ ಸುಮಾರು ಒಂದು ಫರಲಾಂಗುವರಿಗು ಉತ್ತರಕ್ಕಾಗಿ ಹೋಗಿ ದೇವಸ್ಥಾನಕ್ಕೆ ಮುಟ್ಟುತ್ತೆ.

(3) ಮೋದೂರಿಂದ ಕುಣಿಗಲಿಗೆ ದಾರಿ-ಕಲ್ಲನಾಯ್ಕನಹಳ್ಳಿ ಸರ್ವೆ 4ನೆ ಉತ್ತರ ಬವುಂಡರಿಯಿಂದ 1 ಫರಲಾಂಗು ದೂರದಲ್ಲಿ ಕಲ್ಲನಾಯ್ಕನಹಳ್ಳಿ ಸರ್ವೆ 7ನೆ ನಂಬರಿನಲ್ಲಿ ಫಾರೆಸ್ಟು ಪ್ರವೇಶ ಮಾಡುತ್ತೆ. ಅಲ್ಲಿಂದ ಈಶಾನ್ಯಕ್ಕೆ ಸುಮಾರು 6 ಫರಲಾಂಗು ಹೋಗಿ ಕಲ್ಲನಾಯ್ಕನಹಳ್ಳಿ ಗ್ರಾಮದ ಸರ್ವೆ 5ನೆ ನಂಬರು ಮಶ್ಚಿಮದಿಕ್ಕಿನ ಮೂಲೇಲಿ ಬಿಟ್ಟುಬಿಡುತ್ತೆ.

(4) ಹೊಸೂರಿಂದ ಕೆಂಪನಹಳ್ಳಿಗೆ ದಾರಿ-ಹೊಸೂರು ಸರ್ವೆ 10ನೆ ನಂಬರು ಮಧ್ಯ ಭಾಗದ ಬವುಂಡರಿಯಿಂದ ಸುಮಾರು 2 ಫರಲಾಂಗು ದೂರದಲ್ಲಿ ಫಾರೆಸ್ಟನ್ನ ಪ್ರವೇಶಿಸುತ್ತೆ. ಈಶಾನ್ಯಕ್ಕೆ ಸುಮಾರು 1½ ಮೈಲಿ ಹೋಗಿ ಕೆಂಪನಹಳ್ಳಿ ಸರ್ವೆ 31ನೆ ನಂ. ಉತ್ತರದಿಕ್ಕಿನ ಪಾಯಿಂಟಿನಲ್ಲಿ ಫಾರೆಸ್ಟನ್ನು ಬಿಡುತ್ತೆ.

II. ಶಂಕರೇಶ್ವರ ದೇವಸ್ಥಾನ, ಮತ್ತು ದೊಣಿ ಇವುಗಳ ಹಕ್ಕುದಾರಿ ಮಂಜೂರ್ಮಾಡಿಧೆ.

ಈ ದೇವಾಲಯ ಇರುವ ಪ್ರತಿಪಕ್ಕ 10ಗಜ ವುದ್ದ ಜಮಿನನ್ನು ಭಕ್ತಾದಿಗಳು ಪೂಜೆ ವಗೈರೆ ಮಾಡಿಕೊಳ್ಳಲು ಅನುಕೂಲತೆಗಾಗಿ ಬಿಟ್ಟು ಫಾರೆಸ್ಟಿನಲ್ಲಿ ಶೀರಿದ ಭಾಗವೆಂದು ಅದರ ಸುತ್ತಲು ಡಿಮಾರ್ಕೇಷನ್ ಲೈನು ಮಾಡಿಸಲ್ಪಡುತ್ತೆ.

III. ಈ ಕೆಳಗಿನ ಜಮಿನಿನ ಮೇಲೆ ಪಟ್ಟಾ ಹಕ್ಕುದಾರಿ ಮಂಜೂರ್ಮಾಡಿರುತ್ತೆ. ಈ ಜಮಿನು ಸುತ್ತಲು ಡಿಮಾರ್ಕೇಷನ್ ಲೈನು ಮಾಡಿಸಿ ಇಟ್ಟುಕೊಳ್ಳುತ್ತದೆ.

ಗ್ರಾಮ—ಕಲನಾಯ್ಕನಹಳ್ಳಿ. ಸರ್ವೆ ನಂಬರು—6. ವಿಸ್ತೀರ್ಣ—3 ಎಕರೆ 34 ಗುಂಟೆ.

ಪರಾ.—ಜನರು ಮತ್ತು ವೆವಸಾಯದ ದನಗಳಿಗಾಗಿ 9 ಅಡಿ ಅಗಲ ದಾರೀಲಿ ಸಂಚಾರಕ್ಕೆ ಅವಕಾಶವನ್ನುಕೊಟ್ಟಿರುತ್ತೆ. ಈ ದಾರಿ ಆ ಕಲನಾಯ್ಕನಹಳ್ಳಿ ಗ್ರಾಮದ ಸರ್ವೆ 7ನೆ ನಂಬರು ಮಧ್ಯದಲ್ಲಿ ಫಾರೆಸ್ಟಿಗೆ ಪ್ರವೇಶಿಸಿ ಪೂರ್ವದಿಕ್ಕಿಗೆ ಸುಮಾರು ಒಂದು ಫರ್ಲಾಂಗು ವರಿಗೂ ಹೋಗುತ್ತೆ.

ಹುಕುಂ ಬಮೋಜೀಬ್,

ಸಿ. ರಾಮರಾವ್,

ಫಾರ್ ಫಾರೆಸ್ಟ್ ಇಲಾಖೆಯ ಗವರ್ನಮೆಂಟ್ ಆಫೀಷಿಯೇಟಿಂಗ್ ಸೆಕ್ರೆಟರಿ.